# ಭಗವದ್ಗೀತೆ ಎಂದರೇನು?

◆ **ಸ್ವಾಮಿ ನಿತ್ಯಸ್ಥಾನಂದ**

**ಭ**ಗವದ್ಗೀತೆಯು ಒಂದು ಸಾಧನಶಾಸ್ತ್ರ—ಅದು ಅನುಷ್ಠಾನ ಪ್ರಧಾನ ಗ್ರಂಥ. **ಸರ್ವೋಪನಿಷದೋ ಗಾವೋ** ಎಂಬ ಧ್ಯಾನ ಶ್ಲೋಕವು ಈ ವಿಷಯವನ್ನು ಮಾರ್ಮಿಕವಾಗಿ ಸೂಚಿಸುತ್ತದೆ. ಹಾಲು ಇರುವುದೇ ಕುಡಿಯುವುದಕ್ಕಾಗಿ; ನೋಡುವುದಕ್ಕಾಗಿ ಅಲ್ಲ, ಕೇವಲ ವೈಜ್ಞಾನಿಕ ವಿಶ್ಲೇಷಣೆಗಾಗಿಯೂ ಅಲ್ಲ. ಹಾಲನ್ನು ಕುಡಿದು ದೈಹಿಕ ಪುಷ್ಟಿಯನ್ನು ಪಡೆಯುವಂತೆ, ಗೀತಾಮೃತವನ್ನು ಕುಡಿದು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸ ಬೇಕು. ಹಾಲು ರಕ್ತಗತವಾಗಿ ದೇಹದೊಡನೆ ಒಂದಾದಾಗಲೇ ಅದು ದೇಹಕ್ಕೆ ಶಕ್ತಿಯನ್ನು ಕೊಡುತ್ತದೆ. ಹಾಗೆಯೇ ಭಗವದ್ಗೀತೆಯು ನಮ್ಮ ವ್ಯಕ್ತಿತ್ವದೊಡನೆ ಬೆರೆತಾಗಲೇ ನಮಗೆ ಆಧ್ಯಾತ್ಮಿಕ ಶಕ್ತಿಯನ್ನು ನೀಡುತ್ತದೆ. ಅದು ಕೇವಲ ಕಂಠಸ್ಥ ವಾಗಿದ್ದರೆ ಸಾಲದು. ಭಗವದ್ಗೀತೆಯ ಕಂಠಪಾಠ ಸ್ಪರ್ಧೆ, ರಸಪ್ರಶ್ನೆಗಳು, ಪ್ರಬಂಧಸ್ಪರ್ಧೆಗಳು ಇತ್ಯಾದಿಗಳಲ್ಲಿ ಭಾಗ ವಹಿಸುವುದರ ಮೂಲಕ ಭಗವದ್ಗೀತೆಯನ್ನು ಅನುಸರಿಸಿ ದಂತಾಗುವುದಿಲ್ಲ. ಗೀತೆಯ ಮೇಲೆ ಉಪನ್ಯಾಸಗಳನ್ನು ನೀಡುವುದರಿಂದಲೂ, ಅದನ್ನು ಕೇಳುವುದರಿಂದಲೂ ಯಾವ ಪ್ರಯೋಜನವೂ ಆಗುವುದಿಲ್ಲ. ಇವೆಲ್ಲದರ ಮೂಲಕ ಭಗವದ್ಗೀತೆಯು ನಮ್ಮ ಜೀವನವನ್ನು ಎಷ್ಟರಮಟ್ಟಿಗೆ ಪ್ರವೇಶಿಸಿ ಪರಿವರ್ತಿಸಿದೆ ಎನ್ನುವುದು ಮುಖ್ಯ. ಭಗವದ್ಗೀತೆ ಪೂಜಾರ್ಹ ಗ್ರಂಥ, ನಿಜ. ಆದರೆ ಗೀತೆಯನ್ನು ಪೀಠದ ಮೇಲಿರಿಸಿ ಧೂಪ ದೀಪಾದಿಗಳಿಂದ ಬಾಹ್ಯಪೂಜೆ ಮಾಡು ವುದರಿಂದ ಏನೂ ಪ್ರಯೋಜನವಿಲ್ಲ. ಗೀತೆಯ ಸಂದೇಶ ನಮ್ಮ ಹೃದಯಪೀಠದಲ್ಲಿ ಪ್ರತಿಷ್ಠಾಪಿತವಾಗಿ, ನಮ್ಮ ಮಾತು, ಕೃತಿ, ಆಲೋಚನೆಗಳ ಮೂಲಕ ಅದು ಹೊರಸೂಸು ವಂತಾಗಬೇಕು. ನಮ್ಮ ಎಲ್ಲ ಕೃತಿಗಳ ಮೂಲಕ ಅದನ್ನು ಪೂಜಿಸಬೇಕು. ಇದೇ ಭಗವದ್ಗೀತೆಯ ನಿಜವಾದ ಪೂಜೆ. ಆಗ ನಾವೂ ಪೂಜ್ಯರಾಗುತ್ತೇವೆ.

ಭಗವದ್ಗೀತೆ ಎಂದರೆ ಏನು? ಭಗವಂತನಾದ ಶ್ರೀಕೃಷ್ಣನು ಹಾಡಿದ ಗೀತೆ, ಅಥವಾ ಭಗವದ್‌ವಿಷಯಕವಾದ ಗೀತೆ. ನಮ್ಮ ಜೀವನವು ಭಗವನ್ಮಯವಾದರೆ ಅದೇ ಒಂದು ಭಗವದ್ಗೀತೆಯಾಗುತ್ತದೆ. ಇದೇ ಗೀತೆಯ ಉದ್ದೇಶ. ಗೀತೆಯು ಸಂಗೀತದ ಒಂದು ಪ್ರಭೇದ. ಸಂಗೀತವೆಂದರೆ ಶ್ರುತಿಬದ್ಧವಾದ ಧ್ವನಿ. ಒಂದು ಸಂಗೀತಕಛೇರಿಯಲ್ಲಿ ಹಾಡುವವನು ಮಾತ್ರವಲ್ಲದೆ ಅನೇಕ ವಾದ್ಯಗಳಿರುತ್ತವೆ. ಎಲ್ಲ ವಾದ್ಯಗಳನ್ನೂ ಹಾಡುವವನ ಶ್ರುತಿಗೆ ತಕ್ಕಂತೆ ಅಳವಡಿಸಿರುತ್ತಾರೆ. ಒಂದೊಂದು ವಾದ್ಯದ ಧ್ವನಿಯೂ ಬೇರೆ ಬೇರೆ. ವೀಣೆಯ ಧ್ವನಿಯೇ ಬೇರೆ, ಪಿಟೀಲಿನ ಧ್ವನಿಯೇ ಬೇರೆ, ಮೃದಂಗದ ಧ್ವನಿಯೇ ಬೇರೆ—ಆದರೂ ಅವೆಲ್ಲವೂ ಒಂದೇ ಶ್ರುತಿಯಿಂದ ಕೂಡಿರು ವುದರಿಂದ ಅದೊಂದು ಉತ್ತಮ ಸಂಗೀತವಾಗುತ್ತದೆ. ಇಲ್ಲ ದಿದ್ದರೆ ಅದೊಂದು ಕೇವಲ ಸಂತೆಯ ಗದ್ದಲ.

ನಮ್ಮ ಜೀವನದಲ್ಲಿಯೂ ಹಲವಾರು ಅಂಶಗಳಿವೆ—ಇಂದ್ರಿಯ, ಮನಸ್ಸು, ಭಾವನೆ ಇತ್ಯಾದಿ. ಇವುಗಳೆಲ್ಲದರ ಸ್ವರೂಪ, ಕೆಲಸ ಬೇರೆ ಬೇರೆ. ಆದರೆ ಇವೆಲ್ಲವೂ ಭಗವದ್ ಶ್ರುತಿಯೊಂದಿಗೆ ಹೊಂದಿಕೊಂಡು ಕೆಲಸ ಮಾಡಿದಾಗ ನಮ್ಮ ವ್ಯಕ್ತಿತ್ವದಲ್ಲಿ ಸಾಮರಸ್ಯ ಉಂಟಾಗುತ್ತದೆ—ಅದೇ ಒಂದು ಸಂಗೀತವಾಗುತ್ತದೆ, ಗೀತೆಯಾಗುತ್ತದೆ. ಆದ್ದರಿಂದ ಭಗವದ್ ಶ್ರುತಿಬದ್ಧವಾದ ಜೀವನವೇ ಭಗವದ್ಗೀತೆ ಎನ್ನಬಹುದು. ಈ ರೀತಿ ಜೀವನವೇ ಭಗವದ್ಗೀತೆಯಾಗಬೇಕೆಂಬುದೇ ಶ್ರೀಕೃಷ್ಣನ ಉದ್ದೇಶ. ಅದಕ್ಕೇ ಅವನು ಹೇಳುತ್ತಾನೆ: 'ಮನ್ಮನಾ ಭವ **ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು.**' ಮನ್ಮನಾ ಎಂದರೆ ನಿನ್ನ ಮನಸ್ಸು ಅಂದರೆ ಆಲೋಚನಾಶಕ್ತಿ ಭಗವದಭಿಮುಖಿ ವಾಗಿರಲಿ—ಎಲ್ಲ ಆಲೋಚನೆಗಳೂ ಭಗವದಾದರ್ಶದಿಂದ ಪ್ರೇರಿತವಾಗಿರಲಿ. **ಮದ್ಭಕ್ತಃ** ಎಂದರೆ ನಿನ್ನ ಭಾವನಾಶಕ್ತಿ ಭಗವದಭಿಮುಖವಾಗಿರಲಿ—ನಿನ್ನ ಎಲ್ಲ ಭಾವವೂ ಭಗವದ್ಭಕ್ತಿ ಯಿಂದ ಪ್ರೇರಿತವಾಗಿರಲಿ. **ಮದ್ಯಾಜೀ** ಎಂದರೆ ಎಲ್ಲ ಕರ್ಮ ಗಳನ್ನೂ ಭಗವಂತನಿಗೇ ಸಮರ್ಪಿಸು. **ಮಾಂ ನಮಸ್ಕುರು** ಎಂದರೆ ನನಗೇ ನಮಸ್ಕರಿಸು, ಅಂದರೆ ನಿನ್ನ ಅಹಂಕಾರವನ್ನೂ ಭಗವಂತನಿಗೇ ಸಮರ್ಪಿಸು. ಹೀಗೆ ನಮ್ಮ ಎಲ್ಲ ವ್ಯಕ್ತಿತ್ವದ ಅಂಶಗಳೂ (faculties) ಭಗವದ್‌ಶ್ರುತಿಬದ್ಧವಾದಾಗ ನಮ್ಮ ಜೀವನವೇ ಭಗವದದ್ಗೀತೆಯಾಗುತ್ತದೆ. ಗೀತೆಯ ಉದ್ದಕ್ಕೂ ಇಂತಹ ಭಾವನೆಗಳು ನಮಗೆ ಕಂಡುಬರುತ್ತದೆ. (**ಮತ್ಕರ್ಮ ಕೃತ್ ಮತ್ ಪರಮೋ...** ಇತ್ಯಾದಿ).

ಸಮಾಜದಲ್ಲಿಯೂ, ಕುಟುಂಬದಲ್ಲಿಯೂ ಪರಸ್ಪರ ಸಹಕಾರದೊಂದಿಗೆ (**ಪರಸ್ಪರಂ ಭಾವಯಂತಃ**), ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಧರ್ಮಾಚರಣೆಯಲ್ಲಿ ನಿರತರಾಗಿದ್ದರೆ—ತಮ್ಮ ಸ್ವಕರ್ಮದಿಂದಲೇ ಭಗವದರ್ಚನೆ ಮಾಡುತ್ತಿದ್ದರೆ (**ಸ್ವಕರ್ಮಣಾ**

ನಮ್ಮ ಜೀವನದ ಎಲ್ಲ ಅಂಶಗಳೂ ಭಗವದ್ ಶ್ರುತಿಯೊಂದಿಗೆ ಹೊಂದಿಕೊಂಡು ಕೆಲಸ ಮಾಡಿದಾಗ ನಮ್ಮ ವ್ಯಕ್ತಿತ್ವದಲ್ಲಿ ಸಾಮರಸ್ಯ ಉಂಟಾಗುತ್ತದೆ—ಅದೇ ಒಂದು ಸಂಗೀತವಾಗುತ್ತದೆ, ಗೀತೆಯಾಗುತ್ತದೆ, ನಮ್ಮ ಜೀವನವೇ ಭಗವದ್ಗೀತೆಯಾಗುತ್ತದೆ. ಈ ವಿಷಯವನ್ನು ಹೃದಯಸ್ಪರ್ಶಿಯಾಗಿ, ಕಾವ್ಯಮಯವಾಗಿ ನಿರೂಪಿಸಿರುವ ಸ್ವಾಮಿ ನಿತ್ಯಸ್ಥಾನಂದರು ಈ ಪತ್ರಿಕೆಯ ಹಿಂದಿನ ಸಂಪಾದಕರು.

**ತಮಭ್ಯರ್ಚ್ಯ**) ಆಗ ಇಡೀ ಸಮಾಜವೇ ಒಂದು ಭಗವದ್ಗೀತೆ ಯಾಗುತ್ತದೆ. ಪ್ರತಿಯೊಂದು ಕುಟುಂಬವೂ ಭಗವದ್ಗೀತೆ ಯಾಗುತ್ತದೆ. ಆಂತರಿಕ ಸಾಮರಸ್ಯ ಬಾಹ್ಯ ಸಾಮರಸ್ಯಕ್ಕೆ ಎಡೆ ಮಾಡಿಕೊಡುತ್ತದೆ. (ಈ ಸಮಾಜ ಎಂದಾದರೂ ಭಗವದ್ಗೀತೆಯಾಗಲು ಸಾಧ್ಯವೆ!)

ನಮ್ಮ ವ್ಯಕ್ತಿತ್ವ ಒಂದು ತಂತಿ ವಾದ್ಯವಿದ್ದಂತೆ. ಇದರಲ್ಲಿ ಭಾವತಂತಿ, ಆಲೋಚನಾತಂತಿ, ವಿಚಾರತಂತಿ ಇತ್ಯಾದಿಗಳಿವೆ. ಈಗ ಈ ಯಾವ ತಂತಿಯೂ ಸರಿಯಾಗಿ ಕೆಲಸ ಮಾಡುತ್ತಿಲ್ಲ—ಆದ್ದರಿಂದ ನಮ್ಮ ಜೀವನ ಅಪಶ್ರುತಿಯಿಂದ ಕೂಡಿದೆ. ಅನೇಕ ಭಾವೋದ್ವೇಗಗಳ ಬಿರುಗಾಳಿಗೆ ಒಳಗಾಗಿ ಈ ವಾದ್ಯ ಅಸಂಬದ್ಧ ಸಂಗೀತವನ್ನು ಉಂಟುಮಾಡುತ್ತಿದೆ. ತಂತಿಗಳು ಸರಿಯಾಗಿದ್ದು ಒಳ್ಳೆಯ ಸಂಗೀತ ಹೊರಹೊಮ್ಮು ತ್ತಿರುವಾಗಲೂ ಕೆಲವೊಮ್ಮೆ ಅಪಶ್ರುತಿ ಉಂಟಾಗಿಬಿಡುತ್ತದೆ. ಅದು ತಪ್ಪು ತಿಳುವಳಿಕೆ, ಮನಸ್ತಾಪ ಇತ್ಯಾದಿಗಳಿಗೆ ಕಾರಣ ವಾಗಿಬಿಡುತ್ತದೆ. ಈ ವಾದ್ಯವನ್ನು ಸರಿಪಡಿಸಿ, ಅದರಲ್ಲಿ ಉತ್ತಮ ಸಂಗೀತವನ್ನು ನುಡಿಸಬಲ್ಲವನು ಭಗವಂತ ಮಾತ್ರ. ಅದಕ್ಕೇ **ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ** ಎಂದು ಶ್ರೀಕೃಷ್ಣ ಹೇಳುತ್ತಾನೆ. ಈ ವಾದ್ಯವನ್ನು ನುಡಿಸಲು ಅವನಿಗೇ ಬಿಟ್ಟುಬಿಡಬೇಕು. ಆಗ ಒಳ್ಳೆಯ ಸಂಗೀತ ಹೊರ ಹೊಮ್ಮುತ್ತದೆ, ಜೀವನವೇ ಭಗವದ್ಗೀತೆಯಾಗುತ್ತದೆ. ಭಗವಂತ ನುಡಿಸುವ ಗೀತೆ ಭಗವದ್ಗೀತೆ. ಶ್ರೀರಾಮಕೃಷ್ಣರ ಜೀವನ ಅಂತಹ ಭಗವದ್ಗೀತೆಯಾಗಿತ್ತು. "ತಾಯಿ ನುಡಿಸಿದಂತೆ ನುಡಿಯುತ್ತೇನೆ, ನಡೆಸಿದಂತೆ ನಡೆಯುತ್ತೇನೆ" ಎಂದು ಅವರು ಹೇಳುತ್ತಿದ್ದರು.

ನಿಜವಾಗಿಯೂ ಅವನೇ ನುಡಿಸುತ್ತಿರುವುದು (**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ**). ಈ ವಾದ್ಯವೂ ಅವನದೇ, ಇದನ್ನು ನುಡಿಸುತ್ತಿರುವವನೂ ಅವನೇ. ನಮ್ಮ ಅಹಂಕಾರ ಮಧ್ಯದಲ್ಲಿ ತೂರಿಕೊಂಡು ಸಂಗೀತದ ರಾಗವನ್ನು ಕೆಡಿಸುತ್ತದೆ. ಕಂಪ್ಯೂಟರ್‌ನಲ್ಲಿ ವೈರಸ್ ಸೇರಿಕೊಂಡು ಕಾರ್ಯಕ್ರಮವನ್ನೆಲ್ಲ (programmes) ಹಾಳುಮಾಡುವಂತೆ ಈ ಅಹಂಕಾರ ಎಂಬುದು ನಮ್ಮ ಜೀವನಸಂಗೀತವನ್ನೇ ಕೆಡಿಸಿಬಿಡುತ್ತದೆ. ಅದು ವ್ಯಕ್ತಿಯ ಸಂಗೀತವನ್ನೂ, ಕೌಟುಂಬಿಕ ಸಂಗೀತವನ್ನೂ, ಸಾಮಾಜಿಕ ಸಂಗೀತವನ್ನೂ ಕೆಡಿಸುತ್ತದೆ. ಆದ್ದರಿಂದ ಅದಕ್ಕೆ ಅಗತ್ಯವಾಗುವ anti-virus disc ನಮ್ಮೊಂದಿಗೆ ಯಾವಾಗಲೂ ಇರಬೇಕಾಗುತ್ತದೆ. ಅದೇ ಶರಣಾಗತಿಯ ಭಾವ (**ಮಾಮೇಕಂ ಶರಣಂ ವ್ರಜ**). ನಮ್ಮ ಎಲ್ಲ ಕಾರ್ಯಗಳ, ಸಾಧನೆಗಳ ಹಿಂದೆ ಶರಣಾಗತಿಯ ಭಾವ ವಿದ್ದರೆ ಕೆಲಸದ ಒತ್ತಡವೂ (stress) ಇರುವುದಿಲ್ಲ, ಜೀವನ ಗೀತೆಯೂ ಶ್ರುತಿಬದ್ಧವಾಗಿ, ಲಯಬದ್ಧವಾಗಿ ಮುಂದು ವರಿಯುತ್ತದೆ. ಉತ್ತಮ ಸಂಗೀತವೇ ಒತ್ತಡಕ್ಕೆ ಅತ್ಯುತ್ತಮ ಮದ್ದು. ಆ ಸಂಗೀತಕ್ಕಾಗಿ ನಾವು ಬೇರೆಲ್ಲಿಗೂ ಹೋಗ ಬೇಕಾಗಿಲ್ಲ, ಹಣ ಖರ್ಚು ಮಾಡಬೇಕಾಗಿಲ್ಲ. ನಮ್ಮ ಅಹಂಕಾರವನ್ನು ಅಳಿಸಿಹಾಕಿದರೆ ಸಾಕು, ಅದರ ಸದ್ದಡಗಿದರೆ ಸಾಕು. ನಮ್ಮೊಳಗಿನಿಂದಲೇ ಮಧುರ ಗಾನ ಕೇಳಿಬರುತ್ತದೆ. ಅದು ನಮ್ಮ ನರಮಂಡಲವನ್ನೂ ಮನಸ್ಸನ್ನೂ ಶಾಂತಗೊಳಿಸು ತ್ತದೆ.

ಗೀತೆ ಕಾವ್ಯಮಯವೂ ಆಗಿರುತ್ತದೆ. ಕಾವ್ಯದಲ್ಲಿ ಶಬ್ದಾಲಂಕಾರ ಅರ್ಥಾಲಂಕಾರಗಳು ಇರುತ್ತವೆ. ಅರ್ಥಾಲಂಕಾರವೇ ಪ್ರಧಾನ. ಕೆಲವೊಮ್ಮೆ ಶಬ್ದಾಲಂಕಾರಕ್ಕೆ ಪ್ರಾಧಾನ್ಯವಿತ್ತಾಗ ಅರ್ಥಾಲಂಕಾರವು ನಲುಗುತ್ತದೆ. ಆಳವಾದ ಚಿಂತನೆ, ಸ್ವಂತಿಕೆ, ಅರ್ಥಪೂರ್ಣ ಜೀವನ ಇವುಗಳ ಕೊರತೆ ಕಂಡುಬಂದಾಗ ಅದು ಕಾವ್ಯ ಮುಂತಾದ ಕಲೆಗಳಲ್ಲಿಯೂ ಪ್ರತಿಬಿಂಬಿತವಾಗುತ್ತದೆ. ಅಂಥ ಕಡೆ ಕಲೆ ಅರ್ಥಗರ್ಭಿತ ವಾಗಿರುವುದರ ಬದಲು ಕೇವಲ ಬಾಹ್ಯಾಡಂಬರದಿಂದ ಕೂಡಿರುತ್ತದೆ. ಆಗ ಕಾವ್ಯದಲ್ಲಿ ಶಬ್ದಾಲಂಕಾರವೇ ಪ್ರಧಾನ ವಾಗುತ್ತದೆ. ಜೀವನವನ್ನೂ ಒಂದು ಕಾವ್ಯವೆಂದು ಪರಿಗಣಿಸಿ ದರೆ, ಅಲ್ಲಿಯೂ ಎರಡು ಬಗೆಯ ಅಲಂಕಾರಗಳು ಕಂಡು ಬರುತ್ತವೆ. ಕೇವಲ ಬಾಹ್ಯ ವಿಷಯಗಳಿಗೇ ಪ್ರಾಧಾನ್ಯವಿತ್ತು, ಆಡಂಬರದ ಜೀವನವನ್ನು ನಡೆಸಿದರೆ ಅದು ಕಾವ್ಯದ ಶಬ್ದಾಲಂಕಾರಕ್ಕೆ ಸಮಾನ. ಉನ್ನತ ಆದರ್ಶದಿಂದ, ಆಂತರಿಕ ಶ್ರೀಮಂತಿಕೆಯಿಂದ ಕೂಡಿದ ಅರ್ಥಪೂರ್ಣ ಜೀವನ ಕಾವ್ಯದ ಅರ್ಥಾಲಂಕಾರಕ್ಕೆ ಸಮಾನ. **ಯಾಮಿಮಾಂ ಪುಷ್ಪಿತಾಂ ವಾಚಂ** ಇತ್ಯಾದಿ ಶ್ಲೋಕಗಳ ಮೂಲಕವೂ ರಾಜಸಿಕ ಮತ್ತು ತಾಮಸಿಕ ಪೂಜೆಯನ್ನು ವಿವರಿಸುವಾಗಲೂ (೧೭ ಮತ್ತು ೧೮ನೇ ಅಧ್ಯಾಯ) ಶ್ರೀಕೃಷ್ಣನು ಬಾಹ್ಯಾಡಂಬರವನ್ನು ಖಂಡಿಸುತ್ತಾನೆ. ದೈವೀಸಂಪತ್ತಿನಿಂದ ಕೂಡಿದ, ಆತ್ಮನಲ್ಲಿಯೇ ಸಂತುಷ್ಟನಾದ ಅಂತರಾರಾಮನಾದ, ಅಂತರ್ಜ್ಯೋತಿಯುಳ್ಳ (**ಯೋಽನ್ತಃಸುಖೋಽನ್ತರಾರಾಮಃ ತಥಾನ್ತರ್ಜ್ಯೋತಿರೇವ ಯಃ**) ಆಧ್ಯಾತ್ಮಿಕ ಸಾಧಕನು ಅರ್ಥಾಲಂಕಾರದಿಂದ ಶೋಭಿಸುವ ಉತ್ತಮ ಕಾವ್ಯವಾಗುತ್ತಾನೆ. ಇಂತಹ ಕಾವ್ಯಮಯ ರಚನೆಯೇ ಭಗವದ್ಗೀತೆ. ಈ ರೀತಿ ನಮ್ಮ ಇಡೀ ಜೀವನವೇ ಭಗವದ್ಗೀತೆ ಯಾಗಬೇಕೆಂಬುದು ಶ್ರೀಕೃಷ್ಣನ ಉದ್ದೇಶ.

ಕಾವ್ಯದಲ್ಲಿ ಇನ್ನೊಂದು ಪ್ರಧಾನ ಅಂಶ ರಸ. ಗೀತೆ ಯಲ್ಲಿಯೂ ಕರುಣ (ಅರ್ಜುನನ ವಿಷಾದ), ರೌದ್ರ, ಬೀಭತ್ಸ (**ವಿಶ್ವರೂಪ ದರ್ಶನ**), ವೀರ (**ಕ್ಲೈಬ್ಯಂ ಮಾ ಸ್ಮ ಗಮಃ** ಇತ್ಯಾದಿ) ಮುಂತಾದ ರಸಗಳಿವೆ. ಆದರೆ ಗೀತೆಯ ಉದ್ದಕ್ಕೂ ಎದ್ದು ಕಾಣುವ ರಸ ಭಕ್ತಿರಸ. ನಮ್ಮ ಜೀವನವೂ ರಸಮಯ ವಾಗಿರಬೇಕು. ವಿವಿಧ ರಸಗಳಿಂದ ಕೂಡಿರುವಾಗಲೇ ನಮ್ಮ ಜೀವನ ಒಂದು ಉತ್ತಮ ಕಾವ್ಯವಾಗುತ್ತದೆ. ಎಲ್ಲ ರಸಗಳ ಲ್ಲಿಯೂ ಸಾಮರಸ್ಯ ಉಂಟುಮಾಡಬೇಕಾದರೆ ಅದರ ಹಿನ್ನೆಲೆ ಭಕ್ತಿರಸಪ್ರಧಾನವಾಗಿರಬೇಕು. ಆಗ ನಮ್ಮ ಜೀವನವೇ ಭಗವದ್ಗೀತೆಯಾಗುತ್ತದೆ.

ಇಡೀ ಜಗತ್ತೇ ಒಂದು ನೃತ್ಯಸಂಗೀತ. ವಿಶ್ವದ ಪ್ರತಿ ಕಣ ಕಣವೂ ಚಲಿಸುತ್ತ, ಕಂಪಿಸುತ್ತ ಈ ನೃತ್ಯಸಂಗೀತದಲ್ಲಿ ಭಾಗ ವಹಿಸುತ್ತಿದೆ. ಈ ಸಂಗೀತ ನಮಗೆ ಅರ್ಥವಾಗದೆ ಇರ ಬಹುದು. ಎಲ್ಲೆಲ್ಲಿಯೂ ಅರಾಜಕತೆ, ಅಪಸ್ವರ, ಅಸಂಬದ್ಧತೆ ಗಳೇ ನಮಗೆ ಗೋಚರವಾಗುತ್ತಿರಬಹುದು. ಲಘುಸಂಗೀತ ವನ್ನು ಇಷ್ಟಪಡುವವರಿಗೆ ಶಾಸ್ತ್ರೀಯ ಸಂಗೀತ ಅರ್ಥವಾಗು ವುದಿಲ್ಲ. ಅದು ಏನೋ ಕಿರುಚಾಟದಂತೆ ಕೇಳಿಸುತ್ತದೆ. ಆದರೆ ಕೇಳುತ್ತ ಕೇಳುತ್ತ ಅದರಲ್ಲಿ ಅಭಿರುಚಿ ಉಂಟಾದರೆ ಅದೊಂದು ಶ್ರೇಷ್ಠಮಟ್ಟದ ಸಂಗೀತವಾಗಿ ಮನಸೆಳೆಯುತ್ತದೆ. ಹಾಗೆಯೇ ಈ ವಿಶ್ವಸಂಗೀತವನ್ನು ಕೇಳಿ ಅನುಭವಿಸುವ ಕಿವಿ ನಮಗಿರಬೇಕು. ಆಗ ಅದರ ಸೊಬಗನ್ನು ಸವಿಯಬಹುದು. ಸಾಧನೆಯ ಮೂಲಕ ಸೂಕ್ಷ್ಮಗ್ರಹಣ ಶಕ್ತಿಯನ್ನು ಪಡೆದಾಗ, ಎಲ್ಲ ವ್ಯಷ್ಟಿಭಾವವನ್ನು ಮೀರಿ ಸಮಷ್ಟಿಯಲ್ಲಿ ಮನಸ್ಸು ನೆಲೆ ನಿಂತಾಗ ಈ ವಿಶ್ವಗೀತೆಯ ಮಾಧುರ್ಯವನ್ನು ಅನುಭವಿಸ ಬಹುದು. ಫ್ರಿಟ್ಜಾಫ್ ಕಾಪ್ರ ಅವರು ತಮ್ಮ *The Tao of Physics* ಎಂಬ ಪುಸ್ತಕದಲ್ಲಿ ಹೇಳುತ್ತಾರೆ: "ಚಲನೆ ಮತ್ತು ಲಯ ಭೌತದ್ರವ್ಯದ ಬಹುಮುಖ್ಯ ಲಕ್ಷಣಗಳೆಂದು ಆಧುನಿಕ ಭೌತಶಾಸ್ತ್ರವು ನಮಗೆ ತೋರಿಸಿದೆ. ಎಲ್ಲ ಭೌತದ್ರವ್ಯವೂ, ಈ ಭೂಮಿಯ ಮೇಲಿರಲಿ ಅಥವಾ ಬಾಹ್ಯಾಕಾಶದಲ್ಲಿರಲಿ, ನಿರಂತರ ವಿಶ್ವನರ್ತನದಲ್ಲಿ ತೊಡಗಿವೆ... ಕ್ಷೇತ್ರಸಿದ್ಧಾಂತದ ಪ್ರಕಾರ ಪ್ರತಿಯೊಂದು ಕಣವೂ ತನ್ನದೇ ಹಾಡನ್ನು ಹಾಡು ತ್ತಿದೆ. ಅದು ಲಯಬದ್ಧವಾಗಿ ನರ್ತಿಸುತ್ತ ವಿವಿಧ ಶಕ್ತಿವಿನ್ಯಾಸ ಗಳನ್ನೂ, ರೂಪಗಳನ್ನೂ ಉಂಟುಮಾಡುತ್ತಿದೆ. ನಾವೆಲ್ಲರೂ ಅದರ ಶ್ರುತಿಗೆ ತಕ್ಕಂತೆ ನರ್ತಿಸುತ್ತಿರುವೆವು."

ಲೀಲಾನಾಟಕಸೂತ್ರಧಾರಿಯಾದ ಭಗವಂತನು ಪ್ರತಿ ಯೊಂದನ್ನೂ, ಪ್ರತಿಯೊಬ್ಬರನ್ನೂ ತನ್ನದೇ ರೀತಿಯಲ್ಲಿ ನಡೆಸುತ್ತ, ನುಡಿಸುತ್ತ ಒಂದು ವಿರಾಟ್ ಸಂಗೀತನೃತ್ಯ ಮೇಳ ವನ್ನು ನಡೆಸುತ್ತಿರುವನು. ಇಡೀ ವಿಶ್ವವೇ ಒಂದು ಭಗವದ್ಗೀತೆ. ಈ ಗೀತೆಯ ಶ್ರುತಿಯೊಂದಿಗೆ ನಮ್ಮ ಬಾಳಿನ ಶ್ರುತಿಯೂ ಮೇಳೈಸಿದಾಗ ನಮ್ಮ ಬದುಕೂ ಭಗವದ್ಗೀತೆಯಾಗುತ್ತದೆ. ಇದೇ ಭಗವದ್ಗೀತೆಯ ಉದ್ದೇಶ.

*

## ಇದಾವ ನ್ಯಾಯ? ಏನನ್ಯಾಯ?

**ಮ**ಹಾಭಾರತದ ಕತೆ ಎಲ್ಲರಿಗೂ ಗೊತ್ತಿದೆ. ಕೌರವರಿಂದ ಧರ್ಮೋಲ್ಲಂಘನೆ, ರಾಜನೀತಿಶಾಸ್ತ್ರವಿರೋಧ ಆಗಿದ್ದರೂ ಶ್ರೀಕೃಷ್ಣ ಕೂಡಲೇ ಯುದ್ಧಕ್ಕೆ ಅಣಿಯಾಗಲಿಲ್ಲ. ಯುದ್ಧದಿಂದ ಆಗುವ ಅನಾಹುತ, ಘೋರ ದುರಂತ, ವಿಪತ್ ಪರಂಪರೆ ಅವನಿಗೆ ಗೊತ್ತಿತ್ತು. ಯುದ್ಧದಿಂದ ಹಿಂಸೆ, ಪ್ರಾಣಹಾನಿ, ರಕ್ತಪಾತ, ದುಃಖ ಪರಂಪರೆ, ಶಾಂತಿಭಂಗ, ಸಾಮಾಜಿಕ ನೆಮ್ಮದಿಗೆ ಭಂಗ, ಬದುಕಿ ಉಳಿದವರ ಗೋಳು,...... ಹೇಳಿ ಮುಗಿಸಲಾರದ ದುಷ್ಪರಿಣಾ ಮಗಳು ಅನಿವಾರ್ಯ. ಆದ್ದರಿಂದಲೆ ಕೃಷ್ಣ ಪಾಂಡವರನ್ನು ಕೂಡಲೇ ಯುದ್ಧಕ್ಕೆ ಪ್ರಚೋದಿಸಲಿಲ್ಲ. ಕೊನೆಗೆ ಅನಿವಾರ್ಯವಾಗಿ ಯುದ್ಧ ಹೂಡಲೇಬೇಕಾದಾಗ ಅವನ ಸ್ನೇಹಯಾಚನೆಗೆ ಬಂದ ಅರ್ಜುನನಿಗೆ ಸ್ಪಷ್ಟವಾಗಿ "ನಾನು ಶಸ್ತ್ರಪಾಣಿಯಾಗಿ ಹೋರಾಡುವುದೇ ಇಲ್ಲ. ಒಂದು ಬಾಣವನ್ನೂ ಬಿಡುವುದಿಲ್ಲ. ಗದೆ ಬೀಸುವುದಿಲ್ಲ. ನನ್ನ ಸುದರ್ಶನ ಚಕ್ರಾಯುಧವನ್ನೂ ಪ್ರಯೋಗಿಸುವುದಿಲ್ಲ. ಹಾಗೆ ಬೇಕಾದರೆ ನಿನ್ನ ಬೆಂಬಲಕ್ಕಿರುತ್ತೇನೆ" ಎಂದು ಷರತ್ತು ವಿಧಿಸುತ್ತಾನೆ.

ಅರ್ಜುನ ಯುದ್ಧಾಸಕ್ತನಾಗಿ ರಣರಂಗಕ್ಕೆ ಹೋಗಿ, ಯುದ್ಧಾತುರ ರನ್ನು ನೋಡಿ, ತಾನು ಕೈಗೊಂಡ ಯುದ್ಧದಿಂದ ಉಂಟಾಗುವ ಹಿಂಸೆ, ಸ್ವಜನ ಬಾಂಧವರ ಹತ್ಯೆ, ರಕ್ತಪಾತ ಇತ್ಯಾದಿಗಳನ್ನು ನೆನೆದು, ವಿಷಾದದಿಂದ ಬಿಲ್ಲುಬಾಣ ಬತ್ತಳಿಕೆಯನ್ನು ಬಿಸಾಡಿದ. ಆಗ ಶ್ರೀಕೃಷ್ಣ ಹೇಳುತ್ತಾನೆ: "ಈ ಹೃದಯ ದೌರ್ಬಲ್ಯವನ್ನು ತ್ಯಜಿಸು. ಬಾಣ ಬಿಡು. ಉಳಿದದ್ದನ್ನೆಲ್ಲ ನನಗೆ ಬಿಡು. ನಾನು ನೋಡಿಕೊಳ್ಳುತ್ತೇನೆ. ಪಾಪ ಬರುವುದೂ ಇಲ್ಲ. ಏನೂ ಆಗುವುದಿಲ್ಲ. ಗೆದ್ದರೆ ರಾಜ್ಯ ಭೋಗ, ಸತ್ತರೆ ಸ್ವರ್ಗ. ಯುದ್ಧ ಮಾಡು" ಎಂದು ಹಿಂಸಾಮಯ ಕೃತ್ಯಕ್ಕೆ ಪ್ರಚೋದನೆ ಮಾಡುತ್ತಾನೆ.

ಯುದ್ಧವೇ ಬೇಡ, ಹಿಂಸೆ ಕೂಡದು ಎಂದು ಹೇಳುತ್ತಿದ್ದ ಆ ಕೃಷ್ಣ ಧರ್ಮಬಾಹಿರ, ನೀತಿಬಾಹಿರ ಎಂದು ಕಾಣುವ ಈ ಕೃತ್ಯ ವನ್ನು ಏಕೆ ಮಾಡಿಸಿದ? ಈ ವಿಚಾರವಾಗಿ ಕುವೆಂಪು ತಮ್ಮ 'ಪೌರಾಣಿಕ ಯುದ್ಧಗಳು' ಎಂಬ ಪ್ರಬಂಧದಲ್ಲಿ ಶ್ರೀಕೃಷ್ಣನ ಈ ನಡತೆಯನ್ನು ಕಟು ತರ್ಕದಿಂದ ವಿಶ್ಲೇಷಿಸಿದ್ದಾರೆ. ಕೃಷ್ಣನ ಈ ನಡತೆಯನ್ನು ವಿಶ್ಲೇಷಿಸಿ ಕೊನೆಗೆ "ಧರ್ಮ-ಸಂಸ್ಥಾಪನಾಚಾರ್ಯನ ನಡತೆಯನ್ನು ನಮ್ಮ ಮಾನವ ಕಲ್ಪಿತ ನೀತಿಯ, ಅನೀತಿಯ ಅಳತೆ ಗೋಲಿನಿಂದ ಅಳೆಯುವುದು ಸಲ್ಲದು. ಆ ಯುದ್ಧದ ಉದ್ದೇಶ ಏನಾಗಿತ್ತು? ಧರ್ಮಸಂಸ್ಥಾಪನೆ. ಆ ಧರ್ಮ ಯಾವುದು? ಧರ್ಮ ಎಂದರೇನು?" ಎಂಬುದನ್ನು ಕುವೆಂಪು ವಿಶ್ಲೇಷಿಸಿ, ಕೊನೆಗೆ ಶ್ರೀಕೃಷ್ಣನ ಯುದ್ಧಪ್ರಚೋದನೆ ಸಮರ್ಥನೀಯ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಈ ಯುದ್ಧ, ಅಹಿಂಸೆ, ಧರ್ಮಾಧರ್ಮದ ಪ್ರಶ್ನೆಗೆ ಉತ್ತರ: ಶ್ರೀಕೃಷ್ಣ ವ್ಯಾವಹಾರಿಕ ವ್ಯಕ್ತಿ. ಧರ್ಮ ಸಂಸ್ಥಾಪನೆಗೆ ಅಗತ್ಯವಾದ ಎಲ್ಲ ಮಾರ್ಗೋಪಾಯಗಳೂ ಒಳ್ಳೆಯವು, ನ್ಯಾಯ ಎಂಬುದೇ ಅವನ ಬೋಧನೆಯ ಸಾರಸರ್ವಸ್ವ.

ಈ ಸಂದರ್ಭದಲ್ಲಿ ಹಿಂಸೆ ಅಹಿಂಸೆ ಇವುಗಳ ವಿಚಾರವಾಗಿ ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧೀಜಿಯ ಅಭಿಪ್ರಾಯಕ್ಕೂ, ತಿಲಕ್, ಅರವಿಂದರು, ಲಾಲಾ ಲಜಪತರಾಯ್, ನೆಹರೂ, ಸುಭಾಷ್, ಜಯಪ್ರಕಾಶ್, ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್ ಮುಂತಾದವರ ನಿಲುವಿಗೂ ಇದ್ದ ವ್ಯತ್ಯಾಸ ಉಲ್ಲೇಖಾರ್ಹ. ಭಗತ್‌ಸಿಂಗರ ಫಾಶೀ ಶಿಕ್ಷೆಯನ್ನು ತಪ್ಪಿಸುವ ಅವಕಾಶ ತಮ್ಮ ಕೈಯಲ್ಲಿದ್ದರೂ ಗಾಂಧೀಜಿ ಅದನ್ನು ಬಳಸಲಿಲ್ಲ ಎಂಬ ಆರೋಪ ವನ್ನೂ ಮಾಡಲಾಯಿತು. ಶ್ರೀ ಅರವಿಂದರಂತೂ ಗಾಂಧೀಜಿಯ ಅಹಿಂಸಾ ಧೋರಣೆಯನ್ನು ತಮ್ಮ ಸಹಜವಾದ ತಿಳಿ ಹಾಸ್ಯದ ಮೂಲಕ ಲೇವಡಿ ಮಾಡಿದರು. ಸುಭಾಷ್‌ರಂತೂ 'ಚರಕ ತಿರುಗಿಸುತ್ತ ಸ್ವಾತಂತ್ರ್ಯ ಸಂಗ್ರಾಮ ಮಾಡುವುದು ಬಾಲಿಶ' ಎಂದು ಖಂಡಿಸಿದರು. ಆದರೆ ಗಾಂಧೀಜಿಯ ಈ ಕೃತ್ಯ ಇತಿಹಾಸದ ಮೇಲೆ ಯಾವ ಪರಿ ಣಾಮವನ್ನು ಬೀರಿತು ಎಂಬುದು ಚಿಂತನಯೋಗ್ಯವಾದ ವಿಷಯ.

– ಕೋ.ಚೆನ್ನಬಸಪ್ಪ, ಪ್ರಸಿದ್ಧ ಸಾಹಿತಿಗಳು, ಬೆಂಗಳೂರು